**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚಿಕ್ಕೋಡಿ**

| | |
|---|---|
| ಓ ಎಸ್ ನಂ | 137/17 |
| 6 ನೇ ಪ್ರತಿವಾದಿ | ಡಿ .ಡಬ್ಲ್ಯೂ - 2 |
| ದಿನಾಂಕ | 28-10-2025 |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಬಿ ಕೆ ವಕೀಲರಿಂದಃ</u>

ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ದ ದಾಖಲಿಸಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸರ್ವೆ ನಂ. 384 ಒಟ್ಟು ಕ್ಷೇತ್ರ 15 ಎಕರೆ ಇತ್ತು. ಅದರ ಕ್ಷೇತ್ರ 15 ಎಕರೆ 13 ಗುಂಟೆ ಇತ್ತು ಎಂದರೆ ಸರಿ. ಸದರಿ ಜಮೀನು ಶ್ರೀಪತಿ ಕರಡಿಯವರು ಮೂಲ ಮಾಲೀಕರು ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ 5 ಎಕರೆ 24 ಗುಂಟೆಗೆ ಸಂಬಂಧಿಸಿದಂತೆ ಪುಂಡಲೀಕ ಕರಡೆ ಇತನು ರೈತಾವಾ ಜಮೀನು ಎಂದು ಫಾರ್ಮ ನಂ. 7 ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಪುಂಡಲೀಕ ಕರಡೆ ಇವರ ಹೆಸರಿನಲ್ಲಿ 5 ಎಕರೆ 24 ಗುಂಟೆ ಜಮೀನು ಭೂ ನ್ಯಾಯಮಂಡಳಿಯಿಂದ ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2. ಶ್ರೀಪತಿ ಕರಡೆ ರವರ ತಮ್ಮ ಗುರುಪಾದಪ್ಪಾ ಎಂದರೆ ಸರಿ. ಶ್ರೀಪತಿ ಮತ್ತು ಗುರುಪಾದ ಮೊದಲಿನಿಂದಲೇ ಬೇರೆಯಾಗಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಅವರಿಬ್ಬರು ಬೇರೆಯಾಗಿದ್ದರಿಂದ ಗುರುಪಾದಪ್ಪಾ ಇವರು 2 ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಗುರುಪಾದಪ್ಪಾ ಇವರು ಕೂಡಾ 2 ಎಕರೆ ಜಮೀನಿಗೆ ಸಂಬಂಧಿಸಿದಂತೆ ಫಾರ್ಮ ನಂ. 7 ಅರ್ಜಿ ಸಲ್ಲಿಸಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. ಗುರುಪಾದಪ್ಪಾ ಅರ್ಜಿ ಸಲ್ಲಿಸಿದಕ್ಕೆ ಭೂ ನ್ಯಾಯಮಂಡಳಿ ಅವರ ಹೆಸರಿನಲ್ಲಿ 2 ಎಕರೆ ಜಮೀನು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಸರ್ವೆ ನಂ. 384 ರಲ್ಲಿ ಗುರುಪಾದಪ್ಪಾ ಎಷ್ಟು ಕ್ಷೇತ್ರದ ಮಾಲೀಕನಾಗಿದ್ದರು ಎಂದು ನನಗೆ ಗೊತ್ತಿಲ್ಲ. ಗುರುಪಾದಪ್ಪಾ ಇತನು ಸದರಿ ಜಮೀನಿನಲ್ಲಿ 2 ಎಕರೆ ಕ್ಷೇತ್ರಕ್ಕೆ ಮಾಲೀಕನಾಗಿದ್ದನು ಎಂದರೆ ನನಗೆ ಗೊತ್ತಿಲ್ಲ.

3. ಪುಂಡಲೀಕ ಕರಡೆ ಇವರು 5 ಎಕರೆ 24 ಗುಂಟೆಗೆ ಮಾಲೀಕ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಗುರುಪಾದಪ್ಪಾ ತುಕಾರಾಮ ಕರಡೆ ಇವರು 2 ಎಕರೆ ಜಮೀನಿಗೆ ಮಾಲೀಕ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗುರುಪಾದಪ್ಪಾನ ಮಗ ತುಕಾರಾಮ ಕರಡೆ ಇವರು ಅನೀಲ ದೇವಪ್ಪಾ ಖೋತ ಇವರಿಗೆ 1 ಎಕರೆ ಜಮೀನು ದಿಃ21-06-2007 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಅದರಲ್ಲಿ ಉಳಿದ 1 ಎಕರೆ ಜಮೀನು ಗುರುಪಾದನ ಹೆಂಡತಿ ಅಕ್ಕಾತಾಯಿ ಇವರು ಕೃಷ್ಣಾ ಲಕ್ಷ್ಮಣ ಪೂಜಾರಿ ಇವರಿಗೆ 09-01-2012 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆದ ಕಾರಣ ಭೂ

ನ್ಯಾಯಮಂಡಳಿಯಿಂದ ಗುರುಪಾದನ ಹೆಸರಿನಲ್ಲಿ ಮಂಜೂರಾಗಿರುವ ಯಾವುದೇ ಜಮೀನು ಬಾಕಿ ಉಳಿದಿರುವುದಿಲ್ಲಾ ಎಂದರೆ ಸಾಕ್ಷಿಯು ಗುರುಪಾದನ ಮಗ ತುಕಾರಾಮರವರ ಹೆಸರಿನಲ್ಲಿ ಇರುವ 20 ಗುಂಟೆ ಜಮೀನನ್ನು ನಾವು ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಅದನ್ನು ಯಾವಾಗ ಖರೀದಿ ಮಾಡಿರುತ್ತೇವೆ ಎನ್ನುವದು ನನಗೆ ನೆನಪಿಲ್ಲ.

4. ತುಕಾರಾಮನ ತಂದೆ ಗುರುಪಾದಪ್ಪಾ ಗ್ರಾಮ ಲೆಕ್ಕಾಧಿಕಾರಿ ಕೈಯಲ್ಲಿ ಸನದಿ ಎಂದು ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಗುರುಪಾದಪ್ಪಾ ತಿರಿಕೊಂಡ ನಂತರ ಆತನ ಮಗ ತುಕಾರಾಮ ಇತನು ಗ್ರಾಮ ಲೆಕ್ಕಾಧಿಕಾರಿ ಅವರ ಕೈಯಲ್ಲಿ ಸನದಿ ಎಂದು ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆದರೆ ತುಕಾರಾಮನ ತಂದೆ ಗುರುಪಾದಪ್ಪ ಸನದಿ ಎಂದು ಕೆಲಸ ಮಾಡುತ್ತಿದ್ದರು. ತುಕಾರಾಮನಿಗೆ ಮದುವೆ ಆಗಿತ್ತು. ಆತನ ಹೆಂಡತಿ, ಮಕ್ಕಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ತುಕಾರಾಮನಿಗೆ ಮದುವೆ ಆಗಿರುವುದಿಲ್ಲ ಅದಕ್ಕೆ ಹೆಂಡತಿ ಮತ್ತು ಮಕ್ಕಳು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

5. ಶ್ರೀಪತಿ ಕರಡೆ ಇವರು 6 ಎಕರೆ ಜಮೀನು ವಾಳಕೆ ಅನ್ನುವವರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತುಕಾರಾಮ ಹೆಸರಿನಲ್ಲಿ ಇರುವ ದಾಖಲೆಗಳನ್ನು ನೋಡಿ ನಾವು 20 ಗುಂಟೆ ಜಮೀನನ್ನು ಖರೀದಿ ಮಾಡಿಕೊಂಡಿರುತ್ತೇವೆ. ಅದು ಯಾವ ದಾಖಲೆ ಎನ್ನುವದು ನನಗೆ ಹೇಳಲು ಆಗುವುದಿಲ್ಲ. ತುಕಾರಾಮ ಯಾವುದೇ ಜಮೀನಿನ ಮಾಲೀಕ ಆಗಿರುವುದಿಲ್ಲ ಪಹಣಿ ಪತ್ರಿಕೆಯಲ್ಲಿ ಖೊಟ್ಟಿ ಹೆಸರು ಸೇರಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ತುಕಾರಾಮ ಗ್ರಾಮ ಲೆಕ್ಕಾಧಿಕಾರಿಯ ಕೈಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನಿಪಿ 5 ರಂತೆ ಖೊಟ್ಟಿ ಹೆಸರು ಸೇರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 5 ಖೊಟ್ಟಿ ಸೃಷ್ಟಿಸಲಾಗಿದೆ ಎಂದು ವಾದಿಗಳು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

6. ಶ್ರೀಪತಿ ಕರಡೆ ಇವರು ಈಗ ತಿರಿಕೊಂಡಿರುತ್ತಾರೆ ಎಂದರೆ ಸರಿ. ವಾದಿಗಳು ಶ್ರೀಪತಿ ಹೆಂಡತಿ ಮತ್ತು ಮಗಳು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 384 ರಲ್ಲಿ ಶ್ರೀಪತಿ ಕರಡೆ ಇವರು 6 ಎಕರೆ ಜಮೀನು ಮಾರಾಟ ಮಾಡಿರುತ್ತಾರೆ, 5 ಎಕರೆ 24 ಗುಂಟೆ ಭೂ ನ್ಯಾಯಮಂಡಳಿ ಸ್ವಾಧೀನ ಪಡೆದುಕೊಂಡಿರುತ್ತದೆ, 2 ಎಕರೆ ಗುರುಪಾದ ಕರಡೆ ಹೆಸರಿನಲ್ಲಿ ಭೂ ನ್ಯಾಯಮಂಡಳಿಯವರು ಮಂಜೂರು ಮಾಡಿರುತ್ತಾರೆ ಆದ ಕಾರಣ ವಾದಿಗಳ ಹೆಸರಿನಲ್ಲಿ 1 ಎಕರೆ 24 ಗುಂಟೆ ಹಾಗೂ ಫೂಟ ಖರಾಬ 5 ಗುಂಟೆ ಒಟ್ಟು 1 ಎಕರೆ 29 ಗುಂಟೆ ಜಮೀನು ಉಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ 1ನೇ ವಾದಿ ಮರಣ ಹೊಂದಿದ ನಂತರ 2ನೇ ವಾದಿಯು 1 ಎಕರೆ 29 ಗುಂಟೆಗೆ ಸ್ವಾಧೀನತೆಯಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

7. ನಾನು ದಾವಾ ಸ್ವತ್ತಿನಲ್ಲಿ ಕಬ್ಜಾ ವಹಿವಾಟಿಯಲ್ಲಿರುತ್ತೇನೆ ಎಂದು ತೋರಿಸಲು ದಾಖಲೆಗಳು ಇರುತ್ತವೆ. ಸದ್ಯಕ್ಕೆ ಸದರಿ ಆಸ್ತಿಗೆ ನಾನು ಮಾಲೀಕ ಎಂದು ತೋರಿಸಲು ನಿಮ್ಮ ಬಳಿ ದಾಖಲೆಗಳು ಇರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಆರೋಗ್ಯ ಸರಿ ಇಲ್ಲದ ಕಾರಣ ನಾನು ನನ್ನ ಮಗನ ಹೆಸರಿನಲ್ಲಿ ವರ್ಗಾಯಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಕಾನೂನು ಬಾಹಿರವಾಗಿ ತೆಗೆದುಕೊಂಡಿರುವ ಜಮೀನು ಕಾನೂನು ಬಾಹಿರವಾಗಿ ನನ್ನ ಮಗನ ಹೆಸರಿನಲ್ಲಿ ವರ್ಗಾಯಿಸಿರುತ್ತೇನೆ ಎಂದರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ನಾನು ದಾವಾ ಸ್ವತ್ತು ನನ್ನ ಮಗನ ಹೆಸರಿನಲ್ಲಿ ವರ್ಗಾವಣೆ ಮಾಡಿರುವ ಬಗ್ಗೆ ನಮೂದ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

8. ತುಕಾರಾಮ ಇವರು ಯಾವುದೇ ಜಮೀನಿನ ಮಾಲೀಕ ಇರದೆ ಇದ್ದರೂ ಸಹ ಕಾನೂನುಬಾಹಿರವಾಗಿ ಅವರಿಂದ ಜಮೀನು ಖರೀದಿ ಮಾಡಿರುತ್ತೆನೆ ಎಂದರೆ ಸರಿಯಲ್ಲ. ಅದೇ ರೀತಿ 7 ಮತ್ತು 8 ನೇ ಪ್ರತಿವಾದಿಗಳು ಕಾನೂನು ಬಾಹಿರವಾಗಿ 20 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಕಾರಣ ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ವಾದಿಗಳಿಗೆ ತೊಂದರೆ ನೀಡಿದ್ದ ಕಾರಣ ಅವರು ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

ಮರು ವಿಚಾರಣೆಃ ಇಲ್ಲಾ

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಿಕ್ಕೋಡಿ